KAKB620009052018

Presented on : 28-12-2018
Registered on : 28-12-2018
Decided on : 07-03-2026
Duration : 7 years, 2 months, 10 days

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜೇವರ್ಗಿ.**

**ಉಪಸ್ಥಿತರುಃ**

**ಶ್ರೀ ಕಾಶಿನಾಥ ವಿ. ಉಪ್ಪಾರ್**

ಬಿ.ಎಸ್.ಸಿ. ಎಲ್ಎಲ್.ಬಿ.,
ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರ್ಗಿ.

**ಸಿ.ಸಿ.ನಂ.497/2018**

**ದಿನಾಂಕಃ 07ನೇ ಮಾರ್ಚ - 2026 ರಂದು**

**ಫಿರ್ಯಾದಿದಾರರುಃ**

ಕರ್ನಾಟಕ ರಾಜ್ಯ ನೆಲೋಗಿ ಪೊಲೀಸರಿಂದ)

**(ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ಧ -**

**ಆರೋಪಿತರುಃ**

1. ಉಮೇಶ ತಂದೆ ಲಕ್ಷ್ಮಣ ಆನೂರ
   ವಃ 26 ವರ್ಷ, ಉಃ ಒಕ್ಕಲುತನ,

2. ಸುನೀಲ @ ಸುನೀಲಕುಮಾರ ತಂದೆ ಪೀರಪ್ಪ ಕರ್ಚಿ
   ವಃ 24 ವರ್ಷ, ಉಃ ಒಕ್ಕಲುತನ,

3. ಅವದೂತ ತಂದೆ ಕಾಮಣ್ಣ ಕರ್ಚಿ
   ವಃ 35 ವರ್ಷ, ಉಃ ಒಕ್ಕಲುತನ,
   ಎಲ್ಲರೂ ಸಾಃ ಇಟಗಾ, ತಾಃ ಜೇವರ್ಗಿ

KAKB620009052018

**(ಆರೋಪಿತರ ಪರ ಶ್ರೀ ಎಂ. ಎಸ್. ಪಿ., ವಕೀಲರು)**

1. ಪ್ರಕರಣ ನಡೆದ ದಿನಾಂಕ : 01-07-2018
2. ಪ್ರಕರಣ ದಾಖಲಾದ ದಿನಾಂಕ : 01-07-2018
3. ಆರೋಪಿತರನ್ನು ಬಂಧಿಸಿದ ದಿನಾಂಕ: --
4. ಫಿರ್ಯಾದಿದಾರರ ಹೆಸರು : ಚಂದ್ರಶೇಖರ, ಪಿ ಎಸ್ ಐ
5. ಸಾಕ್ಷಿಗಳ ವಿಚಾರಣೆ ಪ್ರಾರಂಭದ ದಿನಾಂಕ : 10-10-2022
6. ಸಾಕ್ಷಿಗಳ ವಿಚಾರಣೆ ಮುಕ್ತಾಯದ ದಿನಾಂಕ : 02-03-2026
7. ಅಪಾದನೆಗಳು : ಭಾ.ದಂ.ಸಂ.ಕಲಂ.379 ರಡಿಯಲ್ಲಿ
8. ನ್ಯಾಯಾಧೀಶರ ತೀರ್ಮಾನ : ಅಂತಿಮ ಆದೇಶದಂತೆ

ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರಗಿ.

**<u>ತೀರ್ಪು</u>**

ಠಾಣಾಧಿಕಾರಿಗಳು, ನೆಲೋಗಿ ಪೊಲೀಸ್ ಠಾಣೆ, ಇವರು ಆರೋಪಿತರ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 379 ರಡಿಯಲ್ಲಿ ಶಿಕ್ಷಾರ್ಹ ಅಪಾದನೆಗಾಗಿ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ.

2. **<u>ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಣೆಃ-</u>**

ಚಾಸಾ-1 ಚಂದ್ರಶೇಖರ, ಪಿ ಎಸ್ ಐ ಇವರು ದಿನಾಂಕ 01-07-2018 ರಂದು ಸಮಯದಲ್ಲಿ ನೆಲೋಗಿ ಪೊಲೀಸ ಠಾಣಾ ವ್ಯಾಪ್ತಿಯ ಇಟಗಾ ಗ್ರಾಮದ ಸೀಮಾಂತರದ ಗೈರಾಣು ಜಮೀನು ಸರ್ವೆ ನಂ.1 ರಲ್ಲಿ ಭೀಮಾ ನದಿಯಲ್ಲಿ,

ಆರೋಪಿತರು ಯಾವುದೇ ಪರವಾನಿಗೆ ಇಲ್ಲದೆ ಕಳ್ಳತನದಿಂದ ಟ್ರ್ಯಾಕ್ಟರನಲ್ಲಿ ಮರಳನ್ನು ಸಂಗ್ರಹಣೆ ಮಾಡುತ್ತಿರುವುದು ಕಂಡು ಬಂತು ನಂತರ ಪಂಚರ ಸಮಕ್ಷಮ ಮರಳನ್ನು ಜಪ್ತಿಪಡಿಸಿಕೊಂಡು ಆರೋಪಿತರು ಸರಕಾರಕ್ಕೆ ಸೇರಿದ ಮರಳನ್ನು ಸರಕಾರದ ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಕಳ್ಳತನದಿಂದ ಮರಳು ಸಂಗ್ರಹಣೆ ಮಾಡಿರುತ್ತಾರೆಂದು ಫಿರ್ಯಾದಿಯನ್ನು ನೀಡಿರುತ್ತಾರೆ.

3. ನಂತರ ಠಾಣಾಧಿಕಾರಿಯವರು ಫಿರ್ಯಾದಿಯನ್ನು ಸ್ವೀಕರಿಸಿ ಸದರಿ ಫಿರ್ಯಾದಿಯ ಆಧಾರದ ಮೇಲೆ ನೆಲೋಗಿ ಪೊಲೀಸರು ತಮ್ಮ ಠಾಣಾ ಗುನ್ನಾ ನಂ.143/2018 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ಆರೋಪಿತರ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 379 ರಡಿಯಲ್ಲಿನ ಶಿಕ್ಷಾರ್ಹ ಅಪರಾಧದಿಂದ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

4. ದೋಷಾರೋಪಣೆ ಪಟ್ಟಿ ಸಲ್ಲಿಸಿದ ನಂತರ ಆರೋಪಿತರ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 379 ರಡಿಯಲ್ಲಿ ಸಂಜ್ಞೆತೆಯನ್ನು ತೆಗೆದುಕೊಂಡು ಕ್ಯಾಲೇಂಡರ ಕೆಸ ಎಂದು ನೊಂದಣಿ ಮಾಡಿಕೊಂಡು ಆರೋಪಿತರಿಗೆ ಸಮನ್ಸ ಜಾರಿಗೊಳಿಸಲಾಯಿತು.

5. ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದು ಕೊಂಡಿರುತ್ತಾರೆ. ದೋಷಾರೋಪಣೆ ಪತ್ರ ಸಲ್ಲಿಸಿದ ನಂತರ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರ ವಿರುದ್ದ ಸಮನ್ಸ ಜಾರಿ ಮಾಡಿ, ಆರೋಪಿತರ ಹಾಜರಾತಿಯನ್ನು ಪಡೆಯಲಾಯಿತು. ನಂತರ ದಂಡ ಪ್ರಕ್ರಿಯಾ

ಸಂಹಿತೆ ಕಲಂ 207 ರ ಪ್ರಕಾರ ದೋಷಾರೋಪಣೆ ಪತ್ರದ ನಕಲು ಪ್ರತಿಯನ್ನು ಆರೋಪಿತರಿಗೆ ನೀಡಿ, ದೋಷಾರೋಪಣೆಯನ್ನು ರಚಿಸುವ ಮುನ್ನ ವಾದ ವಿವಾದವನ್ನು ಆಲಿಸಲಾಯಿತು. ನಂತರ ಭಾರತೀಯ ದಂಡ ಸಂಹಿತೆ ಕಲಂ 379 ರಡಿಯಲ್ಲಿ ದೋಷಾರೋಪಣೆಯನ್ನು ರಚಿಸಿ ಆರೋಪಿತರಿಗೆ ಓದಿ ಹೇಳಲಾಗಿ, ಸದರಿ ದೋಷಾರೋಪಣೆಯ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

6. ಅಭಿಯೋಜನೆಯು ಆರೋಪಿತರ ವಿರುದ್ಧ ಆಪಾದನೆಗಳನ್ನು ಸಾಬೀತು ಪಡಿಸುವ ಸಲುವಾಗಿ ಒಟ್ಟು 07 ಜನ ಸಾಕ್ಷಿದಾರರು ಚಾಸಾ-1 ರಿಂದ 7 ರವರನ್ನು ಪ್ರಾಸಾ-1 ರಿಂದ 7 ಎಂದು ಸಾಕ್ಷಿ ವಿಚಾರಣೆ ಮಾಡಿಸಿದ್ದು, ನಿಶಾನೆ ಪಿ-1 ರಿಂದ 15 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ಸಾಕ್ಷಿದಾರರ ವಿಚಾರಣೆಯಾದ ನಂತರ ದ.ಪ್ರ.ಸಂ.ಕಲಂ.313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಪಡೆಯಲಾಯಿತು. ಆರೋಪಿತರು ತಮ್ಮ ಪರವಾಗಿ ಸಾಕ್ಷಿ ವಿಚಾರಣೆಗೆ ಮುಂದಾಗಿರುವುದಿಲ್ಲ.

7. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು.

8. ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆಃ

**ಅಂಶಗಳು**

1. ದಿನಾಂಕ 01-07-2018 ರಂದು ಸಮಯದಲ್ಲಿ ನೆಲೋಗಿ ಪೊಲೀಸ ಠಾಣಾ ವ್ಯಾಪ್ತಿಯ ಇಟಗಾ ಗ್ರಾಮದ ಸೀಮಾಂತರದ ಗೈರಾಣು ಜಮೀನು ಸರ್ವೆ ನಂ.1 ರಲ್ಲಿ ಭೀಮಾ ನದಿಯಲ್ಲಿ, ಆರೋಪಿತರು ಯಾವುದೇ ಪರವಾನಿಗೆ ಇಲ್ಲದೆ ಕಳ್ಳತನದಿಂದ

ಟ್ರ್ಯಾಕ್ಟರನಲ್ಲಿ ಮರಳನ್ನು ಸಂಗ್ರಹಣೆ ಮಾಡುತ್ತಿರುವುದು ಕಂಡು ಬಂತು ನಂತರ ಪಂಚರ ಸಮಕ್ಷಮ ಮರಳನ್ನು ಜಪ್ತಿಪಡಿಸಿಕೊಂಡು ಆರೋಪಿತರು ಸರಕಾರಕ್ಕೆ ಸೇರಿದ ಮರಳನ್ನು ಸರಕಾರದ ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಕಳ್ಳತನದಿಂದ ಮರಳು ಸಂಗ್ರಹಣೆ ಮಾಡಿರುತ್ತಾರೆಂದು, ಆ ಮೂಲಕ ಭಾ.ದಂ.ಸಂಹೀತೆ ಕಲಂ 379 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತು ಪಡಿಸುತ್ತದೆಯೇ?

2. ಯಾವ ಆದೇಶ ಅಥವಾ ಶಿಕ್ಷೆ ?

9. ಸರಕಾರಿ ಅಭಿಯೋಜಕರು ಆರೋಪಿಗಳು ಚಾಸಾ-1 ರಿಂದ 7 ರವರೆಗಿನ ಸಾಕ್ಷಿಗಳಿಂದ ತಿಳಿದು ಬರುವುದೇನೆಂದರೆ ಆರೋಪಿತರ ವಿರುದ್ದ ಮಾಡಲಾದ ಆರೋಪವು ಸಾಭೀತಾಗಿರುತ್ತದೆ. ಆದ್ದರಿಂದ ಆರೋಪಿತರಿಗೆ ಶಿಕ್ಷೆಯನ್ನು ವಿಧಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

10. ಆರೋಪಿತರ ಪರ ವಕೀಲರು ಆರೋಪಿರು ಯಾವುದೇ ತಪ್ಪು ಮಾಡಿಲ್ಲವೆಂದು ಮತ್ತು ನೆಲೋಗಿ ಪೊಲೀಸ ಆರೋಪಿತರ ವಿರುದ್ದ ಸುಳ್ಳು ಫಿರ್ಯಾದಿ ದಾಖಲಿಸಿರುತ್ತಾರೆಂದು ಆರೋಪಿತರನ್ನು ನಿರಪರಾಧಿಗಳೆಂದು ಬಿಡುಗಡೆ ಮಾಡಬೇಕೆಂದು ಪ್ರಾರ್ಥನೆ ಮಾಡಿರುತ್ತಾರೆ.

11. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

ಅಂಶ ನಂ.1 : ನಕರಾತ್ಮಕವಾಗಿ.

ಅಂಶ ನಂ.2 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ

**ಕಾ ರ ಣ ಗ ಳು**

12. **ಅಂಶ ನಂ.1:-** ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯ ನಿರ್ದಿಷ್ಟ ಆರೋಪವೇನೆಂದರೆ, ದಿನಾಂಕ 01-07-2018 ರಂದು ಸಮಯದಲ್ಲಿ ನೆಲೋಗಿ ಪೊಲೀಸ ಠಾಣಾ ವ್ಯಾಪ್ತಿಯ ಇಟಗಾ ಗ್ರಾಮದ ಸೀಮಾಂತರದ ಗೈರಾಣು ಜಮೀನು ಸರ್ವೆ ನಂ.1 ರಲ್ಲಿ ಭೀಮಾ ನದಿಯಲ್ಲಿ, ಆರೋಪಿತರು ಯಾವುದೇ ಪರವಾನಿಗೆ ಇಲ್ಲದೆ ಕಳ್ಳತನದಿಂದ ಟ್ರ್ಯಾಕ್ಟರನಲ್ಲಿ ಮರಳನ್ನು ಸಂಗ್ರಹಣೆ ಮಾಡುತ್ತಿರುವುದು ಕಂಡು ಬಂತು ನಂತರ ಪಂಚರ ಸಮಕ್ಷಮ ಮರಳನ್ನು ಜಪ್ತಿಪಡಿಸಿಕೊಂಡು ಆರೋಪಿತರು ಸರಕಾರಕ್ಕೆ ಸೇರಿದ ಮರಳನ್ನು ಸರಕಾರದ ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಕಳ್ಳತನದಿಂದ ಮರಳು ಸಂಗ್ರಹಣೆ ಮಾಡಿರುತ್ತಾರೆಂದು ಭಾ.ದಂ.ಸಂ.ಕಲಂ.379, ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವುದಾಗಿ ಆರೋಪಿಸಿದ್ದು, ಸದರಿ ಆರೋಪದ ಅನುಸಾರ ಆರೋಪಿತರ ಹಾಜರಾತಿ ಪಡೆದ ನಂತರ ಆರೋಪಿತರಿಗೆ ಆಪಾದನೆಯನ್ನು ಓದಿ ಹೇಳಿದಾಗ, ಆರೋಪಿತರು ತಾವು ತಪ್ಪು ಮಾಡಿಲ್ಲವೆಂದು ಅಭಿಯೋಜನೆಯವರು ಮಾಡಿದ ಆಪಾದನೆಯು ಅಲ್ಲಗಳೆದಿರುತ್ತಾರೆ. ಕಾನೂನಿಡಿಯಲ್ಲಿ ಲಭ್ಯವಿರುವ ಪೂರ್ವಭಾವನೆ ಏನೆಂದರೆ ಅಭಿಯೋಜನೆಯವರು ಆಪಾದಿತರ ಮೇಲೆ ಮಾಡಿದ ಆರೋಪವನ್ನು ಸಂಶಯಾತೀತವಾಗಿ ರುಜುವಾತು ಪಡಿಸುವವರೆಗೆ ಆರೋಪಿತರನ್ನು ಮುಗ್ದರೆಂದು ಪೂರ್ವಭಾವನೆ ತಳೆಯಬೇಕು ಎಂಬುದಾಗಿ ಆರೋಪಿತರ ವಿರುದ್ದ ಮಾಡಲಾದ ಆರೋಪವನ್ನು ರುಜುವಾತು ಪಡಿಸಲು ಅಭಿಯೋಜನೆಯು ಪ್ರಾಸಾ-1 ರಿಂದ ಪ್ರಾಸಾ-7 ಒಟ್ಟು ಏಳು ಜನ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುತ್ತಾರೆ.

13. ಅಭಿಯೋಜನೆಯ ಸಾಕ್ಷಿ ಚಾಸಾ-1/ಪ್ರಾಸಾ-4 ಚಂದ್ರಶೇಖರ ಸಿಪಿಐ, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 01-07-2018 ರಂದು ತಾನು ತನ್ನ ಮೇಲಾಧಿಕಾರಿಗಳ ಆದೇಶದಂತೆ ನೆಲೋಗಿ ಪೊಲೀಸ ಠಾಣೆಯ ವ್ಯಾಪ್ತಿಯ ಇಟಗಾ ಗ್ರಾಮದ ಭೀಮಾ ನದಿಯಿಂದ ಅಕ್ರಮವಾಗಿ ಟ್ರ್ಯಾಕ್ಟರಗಳ ಮುಖಾಂತರ ಮರಳನ್ನು ತೆಗೆದು ಸಂಗ್ರಹಣ ಮಾಡುತ್ತಿದ್ದಾರೆಂಬ ಮಾಹಿತಿ ಬಂದ ಮೆರೆಗೆ ತಾನು ಮತ್ತ ತಮ್ಮ ಸಿಬ್ಬಂದಿಯಾದ ಚಾಸಾ-6 ರಿಂದ ಚಾಸಾ-8 ಅವರು ನೆಲೋಗಿ ಪೊಲೀಸ ಠಾಣೆಗೆ ಭೇಟ್ಟಿ ನೀಡಿ ಚಾಸಾ-4 ಮತ್ತು 5 ಅವರಿಗೆ ವಿಷಯ ತಿಳಿಸಿ ಪಂಚರನ್ನಾಗಿ ಚಾಸಾ-2 ಮತ್ತು 3 ಅವರನ್ನು ಬರಮಾಡಿಕೊಂಡು ಸಿಬ್ಬಂದಿಯಾದ ಚಾಸಾ-2 ರಿಂದ ಚಾಸಾ-8 ಅವರು ಸೇರಿ ಮದ್ಯಾಹ್ನ 01-15 ಗಂಟೆಗೆ ಗುನ್ನಾ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ ಒಂದು ಟ್ರ್ಯಾಕ್ಟರನಲ್ಲಿ ಮರಳು ತುಂಬುತಿದ್ದು, ಅವರು ತಮ್ಮನ್ನು ನೋಡಿ ಓಡಿ ಹೋದರು, ಸಿ.ಸಿ.ನಂ.42/2019 ನಂತರ ಪಂಚರ ಸಮಕ್ಷಮ ಪರೀಶಿಲನೆ ಮಾಡಲಾಗಿ ಇಟಗಾ ಗ್ರಾಮದ ಗೈರಾಣಿ ಸರ್ವೆ ನಂ.01 ರಲ್ಲಿ ಅಕ್ರಮವಾಗಿ ಸುಮಾರು 90 ಟಿಪ್ಪರನಷ್ಟು ಮರಳನ್ನು ಸಂಗ್ರಹಣೆ ಮಾಡಿದ್ದು ಕಂಡು ಬರುತ್ತದೆ, ನಂತರ ಸದರಿ ಮರಳನ್ನು ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡೆವು, ಮರಳಿನ ಅಂದಾಜು ಮೌಲ್ಯ ರೂ.3,60,000/- ಇರುತ್ತದೆ, ನಂತರ ಓಡಿ ಹೋದ ವ್ಯಕ್ತಿಗಳ ಹೆಸರು ಉಮೇಶ ಮತ್ತು ಸುನೀಲ ಎಂದು ತಿಳಿದು ಬಂದಿರುತ್ತದೆ, ನಂತರ ಠಾಣೆಗೆ ಬಂದು ಠಾಣಾಧಿಕಾರಿಗಳ ಮುಂದೆ ವರದಿ, ಪಂಚನಾಮೆಯನ್ನು ಮುಂದಿನ ಕ್ರಮಕ್ಕಾಗಿ ನೀಡಿರುತ್ತೇನೆ, ದಿನಾಂಕ 19-07-2018 ರಂದು ಆರೋಪಿತರ ಗುರುತಿಸುವಿಕೆ ಬಗ್ಗೆ ತನಿಖಾಧಿಕಾರಿಗಳಿಗೆ ಮರು ಹೇಳಿಕೆ ನೀಡಿರುತ್ತೇನೆ ಎಂದು ತಮ್ಮ ಸಾಕ್ಷಿಯನ್ನು ನುಡಿದಿರುತ್ತಾರೆ. ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಚಾಸಾ-1 ಅವರು ಘಟನಾ ಸ್ಥಳಕ್ಕೆ ಹೋಗದೆ ಆರೋಪಿತರ ವಿರುದ್ದ ಅಕ್ರಮವಾಗಿ ಮರಳನ್ನು ಸಂಗ್ರಹಣೆ ಮಾಡಿರುತ್ತಾರೆಂದು

ಸುಳ್ಳು ಫಿರ್ಯಾದಿ ನೀಡಿರುತ್ತಾರೆಂಬ ಸೂಚನೆಯನ್ನು ನಿರಾಕರಿಸಿರುತ್ತಾರೆ. ಆರೋಪಿತರ ಪರ ವಕೀಲರು ಚಾಸಾ-1 ಅವರಿಗೆ 90 ಟಿಪ್ಪರನಷ್ಟು ಮರಳನ್ನು ತುಂಬಿ ಸಂಗ್ರಹ ಮಾಡಲು ಬಹಳಷ್ಟು ಸಮಯ ಬೇಕಾಗುತ್ತದೆಂಬ ಸೂಚನೆಯನ್ನು ಒಪ್ಪಿಕೊಳ್ಳುತ್ತಾರೆ.

14. ಅಭಿಯೋಜನೆಯ ಚಾಸಾ-2 ರಾಮಚಂದ್ರ, ಮತ್ತು ಚಾಸಾ-3 ಜಗದೀಶ, ಸದರಿ ದಾಳಿಯಲ್ಲಿ ಭಾಗವಹಿಸಿ ಚಾಸಾ-1 ಅವರು ದಿನಾಂಕ 01-07-2018 ಮದ್ಯಾಹ್ನ 01-30 ಕ್ಕೆ ಇಟಗಾ ಸೀಮಾಂತರದ ಸರಕರಿ ಗೈರಾಣಿ ಜಾಗದಲ್ಲಿ ಆರೋಪಿತರು ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಮರಳಿನ ಮೇಲೆ ಪೊಲೀಸರು ದಾಳಿ ಮಾಡಿ ಪಂಚನಮೆ ಮಾಡಿರುತ್ತಾರೆಂದು ನಮೂದಿಸಲಾಗಿರುತ್ತದೆ. ಆದರೆ ಚಾಸಾ-2 ಮತ್ತು ಚಾಸಾ-3 ಅವರು ತಮಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲವೆಂದು ಮತ್ತು ತಮ್ಮ ಮುಂದೆ ಪೊಲೀಸರು ಯಾವುದೇ ಪಂಚನಾಮೆ ಮಾಡಿಲ್ಲವೆಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿಯಾಗಿ ಹೇಳಿರುತ್ತಾರೆ.

15. ಅಭಿಯೋಜನೆಯ ಪ್ರಾಸಾ-6 ಶ್ರೀಶೈಲ ಮುಖ್ಯ ಪೇದೆ, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 01-07-2018 ರಂದು ಮದ್ಯಾಹ್ನ 01-10 ಸುಮಾರಿಗೆ ಚಾಸಾ-1 ಅವರು ತನಗೆ ಮತ್ತು ಚಾಸಾ-2 ರಿಂದ ಚಾಸಾ-8 ಅವರಿಗೆ ಹೇಳಿದ್ದೇನೆಂದರೆ, ಇಟಗಾ ಗ್ರಾಮದ ಭೀಮಾ ನದಿಯಿಂದ ಅಕ್ರಮವಾಗಿ ಟ್ರ್ಯಾಕ್ಟರಗಳ ಮುಖಾಂತರ ಮರಳನ್ನು ತೆಗೆದು ಸಂಗ್ರಹಣೆ ಮಾಡುತ್ತಿದ್ದಾರೆಂಬ ಮಾಹಿತಿ ಬಂದ ಮೆರೆಗೆ ಚಾಸಾ-1, ತಾನು, ಮತ್ತು ಚಾಸಾ-5 ರಿಂದ 8 ವಿಷಯ ತಿಳಿಸಿ ಪಂಚರನ್ನಾಗಿ ಚಾಸಾ-2 ಮತ್ತು 3 ಅವರನ್ನು ಬರಮಾಡಿಕೊಂಡು

ಸಿಬ್ಬಂದಿಯಾದ ಚಾಸಾ-1 ರಿಂದ ಚಾಸಾ-3 ಮತ್ತು ಚಾಸಾ-5 ರಿಂದ 8 ಅವರು ಸೇರಿ ಮದ್ಯಾಹ್ನ 01-15 ಗಂಟೆಗೆ ಗುನ್ನಾ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ ಒಂದು ಟ್ರ್ಯಾಕ್ಟರನಲ್ಲಿ ಮರಳು ತುಂಬುತಿದ್ದು, ಅವರು ತಮ್ಮನ್ನು ನೋಡಿ ಓಡಿ ಹೋದರು, ನಂತರ ಪಂಚರ ಸಮಕ್ಷಮ ಪರೀಶಿಲನೆ ಮಾಡಲಾಗಿ ಇಟಗಾ ಸಿ.ಸಿ.ನಂ.42/2019 ಗ್ರಾಮದ ಗೈರಾಣಿ ಸರ್ವೆ ನಂ.01 ರಲ್ಲಿ ಅಕ್ರಮವಾಗಿ ಸುಮಾರು 90 ಟಿಪ್ಪರನಷ್ಟು ಮರಳನ್ನು ಸಂಗ್ರಹಣೆ ಮಾಡಿದ್ದು ಕಂಡು ಬರುತ್ತದೆ, ನಂತರ ಸದರಿ ಮರಳನ್ನು ಪಂಚರ ಸಮಕ್ಷಮ ಜಪ್ತಿಪಡಿಸಿಕೊಂಡೆವು, ಮರಳಿನ ಅಂದಾಜು ಮೌಲ್ಯ ರೂ.3,60,000/- ಇರುತ್ತದೆ, ನಂತರ ಓಡಿ ಹೋದ ವ್ಯಕ್ತಿಗಳ ಹೆಸರು ಉಮೇಶ ಮತ್ತು ಸುನೀಲ ಎಂದು ತಿಳಿದು ಬಂದಿರುತ್ತದೆ, ನಂತರ ಚಾಸಾ-1 ಅವರು ಠಾಣೆಗೆ ಬಂದು ಠಾಣಾಧಿಕಾರಿಗಳ ಮುಂದೆ ವರದಿ, ಪಂಚನಾಮೆಯನ್ನು ಮುಂದಿನ ಕ್ರಮಕ್ಕಾಗಿ ನೀಡಿರುತ್ತಾರೆ, ದಿನಾಂಕ 01-07-2018 ರಂದು ಘಟನೆಯ ಬಗ್ಗೆ ಚಾಸಾ-11 ಅವರಿಗೆ ಹೇಳಿಕೆ ನೀಡಿರುತ್ತೇನೆ, ದಿನಾಂಕ 19-07-2018 ರಂದು ಆರೋಪಿತರ ಗುರುತಿಸುವಿಕೆ ಬಗ್ಗೆ ತನಿಖಾಧಿಕಾರಿಗಳಿಗೆ ಮರು ಹೇಳಿಕೆ ನೀಡಿರುತ್ತೇನೆ ಎಂದು ತಮ್ಮ ಸಾಕ್ಷಿಯನ್ನು ನುಡಿದಿರುತ್ತಾರೆ. ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ನಿಪಿ-3 ಮತ್ತು ನಿಪಿ-4 ರಲ್ಲಿ ಗುನ್ಹೆಗೆ ಬಳಸಿದ ಟ್ರ್ಯಾಕ್ಟರ ಮತ್ತು ಟ್ರೈಲರಗಳ ಫೋಟೋಗಳಲ್ಲಿ ಯಾವುದೇ ಮರಳು ಇಲ್ಲವೆಂಬ ಪ್ರಶ್ನೆಯನ್ನು ಕೇಳಿದಾಗ ಚಾಸಾ-4 ಅವರು ಸದರಿ ಟ್ರ್ಯಾಕ್ಟರನ್ನು ಠಾಣೆಗೆ ಹಾಜರು ಮಾಡಿದ ಮೇಲೆ ತೆಗೆಯಲಾಗಿರುತ್ತದೆಂದು ಹೇಳುತ್ತಾರೆ. ಚಾಸಾ-1 ಅವರು ತಮ್ಮ ಮೇಲಾಧಿಕಾರಿಗಳಾಗಿರುವುದರಿಂದ ಅವರಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದರೆಂಬ ಸೂಚನೆಯನ್ನು ನಿರಾಕರಿಸಿರುತ್ತಾರೆ. ಈ ಪ್ರಕರಣದಲ್ಲಿ ಚಾಸಾ-5 ರಿಂದ ಚಾಸಾ-8 ರ ಸಾಕ್ಷಿಗಳು ಸಹಾಯಕ ಸರಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಕೈ ಬಿಡಲಾಗಿರುತ್ತದೆ.

16. ಪ್ರಾಸಾ-3 ಪೀರಪ್ಪ, ಮುಖ್ಯ ಪೇದೆ, ಇವರು ತಮ್ಮ ಸಾಕ್ಷ್ಯದಲ್ಲಿ ಏನು ಹೇಳುತ್ತಾರೆಂದರೆ, ದಿನಾಂಕ 07-08-2018 ರಂದು ಬೆಳಿಗ್ಗೆ 11-15 ಗಂಟೆಗೆ ಈ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡ ನೀಲಿ ಬಣ್ಣದ ಟ್ರ್ಯಾಕ್ಟರನ್ನು ಇಟಗಾ ಗ್ರಾಮದದಿಂದ ನೆಲೋಗಿ ಪೊಲೀಸ ಠಾಣೆಗೆ ತಂದು ತನಿಖಾಧಿಕಾರಿಯ ಮುಂದೆ ಹಾಜರ ಪಡಿಸಿರುತ್ತೇನೆ, ತಾನು ನಾಲ್ಕು ಫೋಟೋಗಳನ್ನು ನೋಡುತ್ತಿದ್ದು ಅವುಗಳಲ್ಲಿ ಕಾಣುವ ಟ್ರ್ಯಾಕ್ಟರನ್ನು ಆ ದಿನ ನಾವು ವಶಪಡಿಸಿಕೊಂಡಿರುತ್ತೇವೆ, ಎಂದು ತಮ್ಮ ಸಾಕ್ಷಿಯನ್ನು ನುಡಿದಿರುತ್ತಾರೆ. ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಆರೋಪಿಗೆ ಸಹಾಯವಾಗುವ ಯಾವುದೇ ಪೂರಕವಾದ ಅಂಶಗಳು ದೊರೆತಿರುವುದಿಲ್ಲ.

17. ಚಾಸಾ-10/ಪ್ರಾಸಾ-2 ಪಲ್ಲಾ ಸತ್ಯಶೀಲರೆಡ್ಡಿ ನಿವೃತ್ತ ಎಇಇ, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 01-07-2018 ರಂದು ನೆಲೋಗಿ ಪಿ ಎಸ್ ಐ ಅವರು ಇಟಗಾ ಗ್ರಾಮದಲ್ಲಿ ಸಂಗ್ರಹಿಸಿದ ಮರಳಿನ ಮೌಲ್ಯವನ್ನು ತಿಳಿಸಲು ತಮ್ಮ ಪತ್ರದಲ್ಲಿ ಕೊರಿರುತ್ತಾರೆ, ಸದರಿ ಮರಳು 415.70 ಘನ ಮೀಟರ ಅದರ ಮೌಲ್ಯ 2,70,205/- ಇರುತ್ತದೆ, ಆ ಬಗ್ಗೆ ಮೌಲ್ಯ ಮಾಪನ ಪ್ರಮಾಣ ಪತ್ರವನ್ನು ನೀಡಿರುತ್ತೇನೆ, ಎಂದು ತಮ್ಮ ಸಾಕ್ಷಿಯನ್ನು ನುಡಿದಿರುತ್ತಾರೆ. ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಆರೋಪಿಗೆ ಸಹಾಯವಾಗುವ ಯಾವುದೇ ಪೂರಕವಾದ ಅಂಶಗಳು ದೊರೆತಿರುವುದಿಲ್ಲ.

18. ಪ್ರಾಸಾ-7 ಮಲ್ಲಣ್ಣ ಎಎಸ್ಐ, ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 01-07-2018 ರಂದು ಸಾಯಂಕಾಲ 4-10 ಗಂಟೆ ಸಮಯದಲ್ಲಿ ತಾನು ಠಾಣೆಯಲ್ಲಿದ್ದಾಗ ಚಾಸಾ-1 ಅವರು ಜಪ್ತಿ ಪಂಚನಾಮೆಯೊಂದಿಗೆ ಠಾಣೆಗೆ

ಹಾಜರಾಗಿ ವರದಿಯನ್ನು ಸಲ್ಲಿಸಿದ್ದು, ಅದನ್ನು ಸ್ವೀಕರಿಸಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಲಯಕ್ಕೆ ಮತ್ತು ತನ್ನ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ, ಅದೇ ದಿನ ಚಾಸಾ-4 ರಿಂದ 8 ಅವರ ಹೇಳಿಕೆ ಪಡೆದಿರುತ್ತೇನೆ, ದಿನಾಂಕ 102-07-2018 ರಂದು ಮರಳಿನ ಮೌಲ್ಯಮಾಪನ ಕೊರಿ ಪಿಡಬ್ಲುಡಿ ಇಲಾಖೆಗೆ ಪತ್ರ ಬರೆದುವ ದಿನಾಂಕ 06-08-2018 ರದು ಮರಳಿನ ಮೌಲ್ಯ ಮಾಪನ ವರದಿ ಪಡೆದಿರುತ್ತೇನೆ, ದಿನಾಂಕ 07-08-2018 ರಂದು ಚಾಸಾ-9 ಅವರು ಗುನ್ನೆಗೆ ಬಳಸಿದ ಒಂದು ಟ್ರಾಕ್ಟರ ಮತ್ತು ಒಂದು ಟ್ರಾಲಿಯನ್ನು ಠಾಣೆಗೆ ತಂದು ಹಾಜರುಪಡಿಸಿರುತ್ತೇನೆ, ದಿನಾಂಕ 19-07-2018 ರಂದು ಆರೋಪಿತರ ಗುರುತಿಸುವಿಕೆ ಬಗ್ಗೆ ಚಾಸಾ-1, 4 ರಿಂದ 8 ಅವರ ಮರು ಹೇಳಿಕೆ ಪಡೆದಿರುತ್ತೇನೆ, ದಿನಾಂಕ 18-11-2018 ರಂದು ಆರೋಪಿತರು ಜಾಮೀನು ಪಡೆದುಕೂಂಡು ಠಾಣೆಗೆ ಹಾಜರಾಗಿದ್ದು, ಅವರನ್ನು ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ, ದಿನಾಂಕ 19-07-2018 ರಂದು ಆರೋಪತರು ತಾವೆ ಮರಳು ಸಂಗ್ರಹಿಸಿರುತ್ತಾರೆಂದು ಅವರ ಸ್ವಖುಷಿ ಹೇಳಿಕೆ ಪಡೆದಿರುತ್ತೇನೆ, ದಿನಾಂಕ 15-07-2018, 08-08-2018, 29-10-2018 ರಂದು ವರದಿಗಳನ್ನು ಪಡೆದಿರುತ್ತೇನೆ, ದಿನಾಂಕ 18-11-2018 ರಂದು ತನಿಖೆ ಮುಗಿಸಿ ಆರೋಪಿತರ ವಿರುದ್ದ ಮಾನ್ಯ ನ್ಯಾಯಾಲಯಕ್ಕೆ ದೊಷಾರೊಪಣೆ ಪತ್ರವನ್ನು ಸಲ್ಲಿರುತ್ತೇನೆಂದು, ತಮ್ಮ ಸಾಕ್ಷಿಯನ್ನು ನುಡಿದಿರುತ್ತಾರೆ.  ಆರೋಪಿ ಪರ ವಕೀಲರು ತಮ್ಮ ಪಾಟೀ ಸವಾಲಿನಲ್ಲಿ ಮರಳನ್ನು ತುಂಬಿದ ವ್ಯಕ್ತಿಗಳನ್ನು ಮತ್ತು ಮರಳನ್ನು ತುಂಬಲು ಉಪಯೋಗಿಸಿದ ವಾಹದ ಮಾಲೀಕರನ್ನು ಮತ್ತು ಚಾಲಕರನ್ನು ಆರೋಪಿಗಳನ್ನಾಗಿ ಸೆರ್ಪಡೆ ಮಾಡಿಲ್ಲವೆಂದು ಒಪ್ಪಿಕೊಳ್ಳುತ್ತಾರೆ. ಮರಳನ್ನು ಸಂಗ್ರಹಿಸಿದ ಬಗ್ಗೆ ಫೊಟೋಗಳನ್ನು ತೆಗೆಯಲು ತೊಂದರೆ ಇತ್ತಾ ಎಂಬ ಪ್ರಶ್ನೆಯನ್ನು ಕೇಳಿದಾಗ ಸಾಕ್ಷಿಯು ತೊಂದರೆ ಇರಲಿಲ್ಲವೆಂದು ಹೇಳುತ್ತಾರೆ.  ಈ

ಪ್ರಕರಣದಲ್ಲಿ ಸ್ವತಂತ್ರ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲವೆಂಬ ಸೂಚನೆಯನ್ನು ಒಪ್ಪಿಕೊಳುತ್ತಾರೆ.

19. ಪ್ರಾಸಾ-1 ರಿಂದ 7 ರವರ ಸಾಕ್ಷಿಗಳು ಕೂಲಂಕೂಷವಾಗಿ ಪರಿಶೀಲನೆ ಮಾಡಿದಾಗ ಚಾಸಾ-1 ಅವರು ದಿನಾಂಕ 01-07-2018 ರಂದು ಇಟಗಾ ಗ್ರಾಮದ ಸರಕಾರಿ ಗೈರಾಣು ಜಾಗದ ಸರ್ವೆ ನಂ.1 ರಲ್ಲಿ ಆರೋಪಿತರು ಮರಳನ್ನು ಸಂಗ್ರಹಣೆ ಮಾಡಿದ್ದು ಮದ್ಯಾಹ್ನ 01-30 ಕ್ಕೆ ಪಂಚನಾಮೆ ಮಾಡಿ 90 ಟಿಪ್ಪರನಷ್ಟು ಮರಳನ್ನು ವಶಪಡಿಸಿಕೊಂಡಿರುತ್ತಾರೆಂದು ತಮ್ಮ ಫಿರ್ಯಾದಿಯಲ್ಲಿ ಹೇಳಿರುತ್ತಾರೆ. ಆದರೆ ಅಂಶವನ್ನು ರುಜುವಾತು ಪಡಿಸಲು ಗುನ್ಹೆ ಸ್ಥಳದ ಪಂಚರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ಹೇಳುತ್ತಾರೆ. ಚಾಸಾ-4 ರಿಂದ ಚಾಸಾ-6 ಅವರು ಎಲ್ಲರೂ ಪೊಲೀಸ ಇಲಾಖೆಯ ಅಧಿಕಾರಿಗಳಾಗಿರುತ್ತಾರೆ. ಆದ್ದರಿಂದ ಅವರ ಸಾಕ್ಷಿಯನ್ನು ನಂಬಲು ಅನರ್ಹವಾಗಿರುತ್ತದೆ. ಆರೋಪಿತರೆ ಮರಳನ್ನು ಸಂಗ್ರಹಿಸಿದ್ದಾರೆಂದು ರುಜುವಾತು ಪಡಿಸಲು ಯಾವುದೇ ದೃಢವಾದ ಸಾಕ್ಷಿಗಳು ಇರುವುದಿಲ್ಲ. ವಶಪಡಿಸಿಕೊಂಡ ಮರಳು ಮತ್ತು ಮರಳನ್ನು ಸಂಗ್ರಹಿಸಿದ ಜಾಗವು ಆರೋಪಿತರಿಗೆ ಸಂಬಂದಿಸಿದೆ ಎಂದು ತೋರಿಸಲು ತನಿಖಾಧಿಕಾರಿಗಳು ಯಾವುದೇ ದಸ್ತಾವೇಜು ಸಾಕ್ಷಿಗಳನ್ನು ಹಾಜರ ಪಡಿಸಿರುವುದಿಲ್ಲ. ತನಿಖಾಧಿಕಾರಿಗಳು ಮರಳನ್ನು ಸಂಗ್ರಹಿಸಿದ ಜಾಗ ಸರಕಾರಿ ಗೈರಾಣು ಜಾಗ ಸರ್ವೆ ನಂ.1 ನಿರ್ದಿಷ್ಟವಾಗಿ ಯಾವ ಭಾಗದಲ್ಲಿ ಸಂಗ್ರಹಿಸಿದ್ದಾರೆಂದು ಮತ್ತು ಅವುಗಳ ಫೊಟೋಗಳನ್ನು ಹಾಜರಪಡಿಸಿರುವುದಿಲ್ಲ. ತನಿಖಾಧಿಕಾರಿಗಳು ಈ ಪ್ರಕರಣದಲ್ಲಿ ಮರಳನ್ನು ಸಂಗ್ರಹಿಸಿದ ಜಾಗದ ಮತ್ತು ಮರಳಿನ ಫೊಟೋಗಳನ್ನು ತೆಗೆಯಲು ಅವಕಾಶ ಇದ್ದರು ಸಹಿತ ದೊಷಾರೋಪಣೆ ಪಟ್ಟಿಯಲ್ಲಿ ಹಾಜರು ಪಡಿಸಿರುವುದಿಲ್ಲ. ತನಿಖಾಧಿಕಾರಿಗಳು ಈ ಪ್ರಕರಣದಲ್ಲಿ ಸ್ವತಂತ್ರ ಸಾಕ್ಷಿದಾರರ

ಹೇಳಿಕೆಯನ್ನು ಪಡೆದುಕೊಳ್ಳದೆ ಇರುವುದು ಕಂಡುಬರುತ್ತದೆ. ಆದ್ದರಿಂದ ಅಭಿಯೋಜನೆಯು ಆರೋಪಿತರು ಇಟಗಾ ಗ್ರಾಮದ ಗೈರಾಣು ಸರ್ವೆ ನಂ.1 ರಲ್ಲಿ ಅಕ್ರಮವಾಗಿ ಮರಳನ್ನು ಸಂಗ್ರಹಿಸಿದ್ದಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸಲು ವಿಫಲರಾಗಿರುತ್ತಾರೆ, ಆದ್ದರಿಂದ ಸಂಶಯದ ಲಾಭವನ್ನು ಆರೋಪಿತರಿಗೆ ನೀಡುತ್ತಾ ಸಂಶಯದ ಲಾಭವನ್ನು ಆರೋಪಿತರಿಗೆ ನೀಡುತ್ತಾ ಅಂಶ-1ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

20. **ಅಂಶ ನಂ.2:-** ಅಂಶ ನಂ.1ನ್ನು ನಕಾರಾತ್ಮಕ ಎಂದು ಉತ್ತರಿಸಿರುವುದರಿಂದ ಈ ಕೆಳಕಂಡ ಆದೇಶ ಮಾಡಲಾಗಿರುತ್ತದೆ.

**ಆ ದೇ ಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248 (1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ 379 ರಡಿಯಲ್ಲಿನ ಶಿಕ್ಷಾರ್ಹ ಅಪರಾಧಕ್ಕೆ ನಿರ್ದೋಷಿಗಳೆಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನು ಬಾಂಡ್ ಮತ್ತು ಮುಚ್ಚಳಿಕೆಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ. 437(ಎ) ರಡಿ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು

ದಿನಾಂಕ 07ನೇ ಮಾರ್ಚ -2026 ರಂದು ತೀರ್ಪನ್ನು ಘೋಷಿಸಲಾಯಿತು)

**(ಶ್ರೀ ಕಾಶಿನಾಥ ವಿ. ಉಪ್ಪಾರ್)**
ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಜೇವರ್ಗಿ.

## ಅನುಬಂಧ

## ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ

ಪಿ.ಡಬ್ಲ್ಯೂ-1 : ಜಗದೀಶ ತಂದೆ ಕಾಮಣ್ಣ

ಪಿ.ಡಬ್ಲ್ಯೂ-2 : ಪಲ್ಲಾ ಸತ್ಯಶೀಲರೆಡ್ಡಿ ನಿವೃತ್ತ ಎಇಇ

ಪಿ.ಡಬ್ಲ್ಯೂ-3 : ಪೀರಪ್ಪ ತಂದೆ ಅಯ್ಯಪ್ಪ ಬಡಿಗೇರ ಮುಖ್ಯ ಪೇದೆ

ಪಿ.ಡಬ್ಲ್ಯೂ-4 : ಚಂದ್ರಶೇಖರ ತಂದೆ ಬಸ್ಸಪ್ಪ ಸಿಪಿಐ

ಪಿ.ಡಬ್ಲ್ಯೂ-5 : ರಾಮಚಂದ್ರ ತಂದೆ ಗುರುಪಾದಪ್ಪ

ಪಿ.ಡಬ್ಲ್ಯೂ-6 : ಶ್ರೀಶೈಲ ತಂದೆ ಶಿವಶರಣಪ್ಪ ಮುಖ್ಯ ಪೇದೆ

ಪಿ.ಡಬ್ಲ್ಯೂ-7 : ಮಲ್ಲಣ್ಣ ತಂದೆ ಬಸ್ಸಣ್ಣ ಎ ಎಸ್ ಐ

## ಅಭಿಯೋಜನೆಯ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ

| | | | |
|---|---|---|---|
| ನಿ.ಪಿ.1 | | : | ಪಂಚನಾಮೆ |
| ನಿ.ಪಿ.1 | (ಎ) | : | ಪ್ರಾಸಾ-1 ರವರ ಸಹಿ |
| ನಿ.ಪಿ.1 | (ಬಿ) | : | ಸಹಿ |
| ನಿ.ಪಿ.1 | (ಸಿ) | : | ಪ್ರಾಸಾ-5 ರವರ ಸಹಿ |
| ನಿ.ಪಿ.2 | | : | ಮರಳಿನ ಮೌಲ್ಯದ ಪ್ರಮಾಣ ಪತ್ರ |
| ನಿ.ಪಿ.2 | (ಎ) | : | ಪ್ರಾಸಾ-1 ರವರ ಸಹಿ |
| ನಿ.ಪಿ.2 | (ಬಿ) | : | ಪ್ರಾಸಾ-7 ರವರ ಸಹಿ |
| ನಿ.ಪಿ.3 ರಿಂದ 6 | | : | ನಾಲ್ಕು ಫೋಟೋಗಳು |

| | | | |
|---|---|---|---|
| ನಿ.ಪಿ.7 | | : | ವರದಿ |
| ನಿ.ಪಿ.7 | (ಎ) | : | ಸಹಿ |
| ನಿ.ಪಿ.7 | (ಬಿ) | : | ಪ್ರಾಸಾ-7 ರವರ ಸಹಿ |
| ನಿ.ಪಿ.8 | | : | ಪ್ರಥಮ ವರ್ತಮಾನ ವರದಿ |
| ನಿ.ಪಿ.9 | | : | ಜಪ್ತಿ ಪಂಚನಾಮೆ |
| ನಿ.ಪಿ.9 | (ಎ) | : | ಪ್ರಾಸಾ-7 ರವರ ಸಹಿ |
| ನಿ.ಪಿ.10 | | : | ಆರೋಪಿತರ ಸ್ವಖುಷಿ ಹೇಳಿಕೆ |
| ನಿ.ಪಿ.10 | (ಎ) | : | ಸಹಿ |
| ನಿ.ಪಿ.11 | | : | ಆರೋಪಿತರ ಸ್ವಖುಷಿ ಹೇಳಿಕೆ |
| ನಿ.ಪಿ.11 | (ಎ) | : | ಸಹಿ |
| ನಿ.ಪಿ.12 | | : | ಆರೋಪಿತರ ಸ್ವಖುಷಿ ಹೇಳಿಕೆ |
| ನಿ.ಪಿ.12 | (ಎ) | : | ಸಹಿ |
| ನಿ.ಪಿ.13 ರಿಂದ 15 | | : | ಚಾಸಾ-5 ಅವರ ವರದಿಗಳು |

**ಆರೋಪಿತರ ಪರವಾಗಿ ಗುರ್ತಿಸಲ್ಪಟ್ಟಿರುವ ಸಾಕ್ಷಿದಾರರ ಪಟ್ಟಿ**

- ಇಲ್ಲ -

**ಆರೋಪಿತರ ಪರವಾಗಿ ಗುರ್ತಿಸಲ್ಪಟ್ಟಿರುವ ದಸ್ತಾವೇಜುಗಳ ಪಟ್ಟಿ**

- ಇಲ್ಲ -

**ಅಭಿಯೋಜನೆ ಪರವಾಗಿ ಗುರ್ತಿಸಲಾದ ಮುದ್ದೆಮಾಲುಗಳ ವಿವರ**

- ಇಲ್ಲ -

ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.

Dictated on : 07-03-2026

KAKB620009052018

Transcribed on : 07-03-2026
checked on : 07-03-2026
Signed on : 07-03-2026

KASHINATH VASANT UPPAR

Digitally signed by KASHINATH VASANT UPPAR
Date: 2026.03.10 10:45:18 +0530

(**Kashinath V. Uppar**)
**CIVIL JUDGE JMFC, Jewargi.**

Visit **ecourts.gov.in** for updates or download mobile app "**eCourts Services**" from Android or iOS